# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೪ಎ<br>Part – IVA | ಬೆಂಗಳೂರು, ಗುರುವಾರ, ೨೯, ಜನವರಿ, ೨೦೨೬(ಮಾಘ, ೦೯, ಶಕವರ್ಷ, ೧೯೪೭)<br>BENGALURU, THURSDAY, 29, JANUARY, 2026(MAGHA, 09, SHAKAVARSHA, 1947) | ನಂ. ೧೦೮<br>No.108 |
|---|---|---|

## ಕರ್ನಾಟಕ ಸರ್ಕಾರ

ಸಂಖ್ಯೆ:ಗ್ರಾಅಪ/58/ತಾಪಸ 2023

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ: 29-01-2026.

### ಅಧಿಸೂಚನೆ:

ನಗರಾಭಿವೃದ್ಧಿ ಇಲಾಖೆಯು, ಕಲಬುರಗಿ ಜಿಲ್ಲೆಯ, ಸೇಡಂ ತಾಲ್ಲೂಕಿನ ಕೆಲವು ಗ್ರಾಮಗಳನ್ನು, ನಗರ ಸ್ಥಳೀಯ ಸಂಸ್ಥೆಗಳಿಗೆ ಸೇರ್ಪಡೆಗೊಳಿಸಿ ಆದೇಶಿಸಿರುತ್ತದೆ. ಅದರನ್ವಯ ಸದರಿ ತಾಲ್ಲೂಕಿನ ತಾಲ್ಲೂಕು ಪಂಚಾಯತಿಯ ಚುನಾಯಿತ ಸದಸ್ಯರ ಸಂಖ್ಯೆ ಹಾಗೂ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ಸೀಮಾ/ಗಡಿಗಳನ್ನು ಮರು ನಿಗದಿಪಡಿಸಬೇಕಾಗಿರುತ್ತದೆ. ಆದುದರಿಂದ ಸರ್ಕಾರವು ದಿನಾಂಕ:16-12-2023ರಂದು ಹೊರಡಿಸಿದ್ದ ಅಧಿಸೂಚನೆಯಲ್ಲಿನ, ಕಲಬುರಗಿ ಜಿಲ್ಲೆಯ ಸೇಡಂ ತಾಲ್ಲೂಕು ಪಂಚಾಯಿತಿಯ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ಸೀಮಾ/ಗಡಿ ನಿರ್ಣಯವನ್ನು ಹಿಂಪಡೆದು ದಿನಾಂಕ:06-01-2026 ರಂದು ಆದೇಶಿಸಿದೆ.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 308-ಇ ರಡಿ ರಚಿತವಾಗಿರುವ ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗವು, ಅಧಿನಿಯಮದ ಪ್ರಕರಣ 308-ಎಫ್ ರಡಿಯಲ್ಲಿನ ಉಪಬಂಧಗಳನುಸಾರ ಕಲಬುರಗಿ ಜಿಲ್ಲೆಯ ಸೇಡಂ ತಾಲ್ಲೂಕು ಪಂಚಾಯಿತಿಗೆ ಆಯ್ಕೆಯಾಗುವ ಚುನಾಯಿತ ಸದಸ್ಯರ ಸಂಖ್ಯೆಯನ್ನು ಹಾಗೂ ತಾಲ್ಲೂಕು ಪಂಚಾಯಿತಿ ಅಧಿಕಾರ ವ್ಯಾಪ್ತಿಯೊಳಗಿನ ಪ್ರದೇಶವನ್ನು **18** ಏಕ ಸದಸ್ಯ ತಾಲ್ಲೂಕು ಪಂಚಾಯಿತಿ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳನ್ನಾಗಿ ವಿಂಗಡಿಸಿ, ಅವುಗಳ ಸೀಮಾ/ಗಡಿಯನ್ನು ನಿರ್ಣಯಿಸಿ ಶಿಫಾರಸ್ಸು ವರದಿಯನ್ನು ದಿನಾಂಕ:27-01-2026ರಂದು ಸಲ್ಲಿಸಿರುತ್ತದೆ.

ಈ ಶಿಫಾರಸ್ಸು ವರದಿಯನ್ನು ಸರ್ಕಾರವು ಅಂಗೀಕರಿಸಿ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 121, 122 ಹಾಗೂ 124ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕಲಬುರಗಿ ಜಿಲ್ಲೆಯ ಸೇಡಂ ತಾಲ್ಲೂಕು ಪಂಚಾಯಿತಿಯ ಚುನಾಯಿತ ಸದಸ್ಯರ ಸಂಖ್ಯೆಯನ್ನು ಕೋಷ್ಟಕ **"ಅ"** ರಂತೆ ಹಾಗೂ ತಾಲ್ಲೂಕು ಪಂಚಾಯಿತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ಸಂಖ್ಯೆ ಹಾಗೂ ಹೆಸರು ಮತ್ತು ತಾಲ್ಲೂಕು ಪಂಚಾಯಿತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ವ್ಯಾಪ್ತಿಯಲ್ಲಿನ ಗ್ರಾಮಗಳನ್ನು ಕೋಷ್ಟಕ **"ಆ"** ರಂತೆ ನಿಗದಿಪಡಿಸಿ ಆದೇಶಿಸಿದೆ.

**ಕೋಷ್ಟಕ 'ಅ'**

| ಕಲಬುರಗಿ ಜಿಲ್ಲೆ | | |
|---|---|---|
| ಕ್ರ. ಸಂ. | ತಾಲ್ಲೂಕು ಪಂಚಾಯತಿಯ ಹೆಸರು | ತಾಲ್ಲೂಕು ಪಂಚಾಯತಿಯ ಸದಸ್ಯರ ಸಂಖ್ಯೆ |
| 1 | 2 | 3 |
| | ಸೇಡಂ | 18 |

**ಕೋಷ್ಟಕ 'ಆ'**

| ಕಲಬುರಗಿ ಜಿಲ್ಲೆ | | |
|---|---|---|
| ಕ್ರ ಸಂ | ತಾಲ್ಲೂಕು ಪಂಚಾಯತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ಸಂಖ್ಯೆ ಮತ್ತು ಹೆಸರು | ತಾಲ್ಲೂಕು ಪಂಚಾಯತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ವ್ಯಾಪ್ತಿಯಲ್ಲಿನ ಗ್ರಾಮಗಳ ಹೆಸರು |
| 1 | 2 | 3 |
| ಸೇಡಂ ತಾಲ್ಲೂಕು ಪಂಚಾಯಿತಿ | | |
| 1 | 01-ಮಳಖೇಡ | ಮಳಖೇಡ ಜೆ, ಮಳಖೇಡ ಕೆ, ಸಮಖೇಡ. |
| 2 | 02-ಕುಕ್ಕುಂದಾ | ಕುಕ್ಕುಂದಾ, ಮೀನಹಾಬಳ, ಬೀರನಳ್ಳಿ, ತೋಟ್ನಳ್ಳಿ, ಹುಣಸನಹಳ್ಳಿ, ಬೀಜನಳ್ಳಿ, ಸಂಗಾವಿ (ಎಂ), ಅರೇಬೊಮ್ಮನಹಳ್ಳಿ. |
| 3 | 03-ತೇಲ್ಕೂರ | ತೇಲ್ಕೂರ, ಸಂಗಾವಿ (ಟಿ), ಲೋಹಾಡ, ಸೂರವಾರ, ಹಾಬಳ ಟಿ, ಯಡ್ಡಳ್ಳಿ, ಯಡಗಾ, ಬಿಬ್ಬಳ್ಳಿ, ಕಾಚೂರ, ತರನಳ್ಳಿ, ಮುಗನೂರ, ಸಟಪಟನಹಳ್ಳಿ. |
| 4 | 04-ನೃಪತುಂಗ ನಗರ | ನೀಲಹಳ್ಳಿ, ಹೊಸಳ್ಳಿ, ಕೊಂಕನಳ್ಳಿ, ನೃಪತುಂಗ ನಗರ, ರಾಜೀವ ನಗರ, ಭೀಮನಗರ. |
| 5 | 05-ಆಡಕಿ | ಆಡಕಿ, ಜವಾಹಾರ ನಗರ, ಮದಕಲ್, ಇಂಜೇಪಲ್ಲಿ, ಕೊಂತನಪಲ್ಲಿ, ಸೋಮಪಲ್ಲಿ. |
| 6 | 06-ಜಾಕನಪಲ್ಲಿ | ಜಾಕನಪಲ್ಲಿ, ರುದ್ರವಾರ, ಮುನಕನಪಲ್ಲಿ, ಕಡಚರ್ಲಾ,ಜಿಲ್ಲೇಡಪಲ್ಲಿ, ಬೀದರಚೇಡ, ಗೋಪನಪಲ್ಲಿ (ಕೆ), ಇಮಾಡಾಪೂರ, ಮದರ ನಾಗಸನಪಲ್ಲಿ. |
| 7 | 07-ಕುರಕುಂಟಾ | ಕುರಕುಂಟಾ, ಹಯ್ಯಾಳ. |
| 8 | 08-ಮದನಾ | ಮದನಾ, ಕಡತಾಲ, ಕೋನಾಪೂರ, ರಾಘಪೂರ. |
| 9 | 09-ಕೋಡ್ಲಾ | ಕೋಡ್ಲಾ, ಸಿಂಧನಮಡು, ಹಣಮನಹಳ್ಳಿ, ಗೌಡನಳ್ಳಿ. |
| 10 | 10-ರಂಜೋಳ | ರಂಜೋಳ ಮಾಧವಾರ, ಚಿಟಕನಪಲ್ಲಿ, ಅಮರವಾದಿ, ಹಾಳಹಣಮನಹಳ್ಳಿ, ಭೂತಪೂರ, ಗುಂಡಳ್ಳಿ ಬಿ, ಕಾಚವಾರ, ತುರ್ಕಬೊಮ್ಮನಳ್ಳಿ, ತುರನೂರ, ರಂಗವಾರ. |
| 11 | 11-ಊಡಗಿ | ಊಡಗಿ, ಹಂಗನಹಳ್ಳಿ, ಕಲಕಂಭ, ಅಳ್ಳೋಳ್ಳಿ, ಬೆನಕನಳ್ಳಿ, ಮುಷ್ಟಳ್ಳಿ, ಮೈಲವಾರ, ನಾಮವಾರ. |
| 12 | 12-ಮುಧೋಳ | ಮುಧೋಳ, ಕೊಂಪಲ್ಲಿ ಜೆ. |
| 13 | 13-ಕಾನಾಗಡ್ಡಾ | ಕಾನಾಗಡ್ಡಾ, ಗಂಗಾರಾವಲಪಲ್ಲಿ, ತೋಲಮಾಮಡಿ, ಯಾನಾಗುಂದಿ, ಚಂದಾಪೂರ, ಪಾಕಾಲ, ಕಿಷ್ಟಾಪೂರ. |
| 14 | 14-ಮೇದಕ | ಮೇದಕ, ಶಿಲಾರಕೋಟ, ಗಜಲಾಪೂರ, ಶಂಕರಾಜಪೂರ, ಶಾಬಾಜಪೂರ, ನಾಡೇಪಲ್ಲಿ, ಕದ್ಲಾಪೂರ, ಬನ್ನೂರ (ಜಿ). |

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



| ಕಲಬುರಗಿ ಜಿಲ್ಲೆ | | |
|---|---|---|
| **ಕ್ರ ಸಂ** | **ತಾಲ್ಲೂಕು ಪಂಚಾಯತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ಸಂಖ್ಯೆ ಮತ್ತು ಹೆಸರು** | **ತಾಲ್ಲೂಕು ಪಂಚಾಯತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ವ್ಯಾಪ್ತಿಯಲ್ಲಿನ ಗ್ರಾಮಗಳ ಹೆಸರು** |
| **1** | **2** | **3** |
| **15** | 15-ರಿಬ್ಬನಪಲ್ಲಿ | ರಿಬ್ಬನಪಲ್ಲಿ, ಖಂಡೇರಾಯನಪಲ್ಲಿ, ಮಲ್ಲಾಬಾದ, ಅನಂತಪೂರ, ಲಿಂಗಂಪಲ್ಲಿ, ಬೊಂದೆಪಲ್ಲಿ, ಈರ್ನಾಪಲ್ಲಿ, ಗುಂಡೇಪಲ್ಲಿ (ಕೆ), ಇಂದಿರಾ ನಗರ, ರಾಜೋಳ (ಕೆ). |
| **16** | 16-ಕೋಲಕುಂದಾ | ಕೋಲಕುಂದಾ, ಮಲ್ಕಾಪಲ್ಲಿ, ಗಾಡದನ್ನಾ, ವೆಂಕಟಾಪೂರ, ದುಗನೂರ. |
| **17** | 17-ಹಂದರಕಿ | ಹಂದರಕಿ, ಹುಳಗೋಳ, ದೇವನೂರ, ಬಿಲಕಲ, ನಾಚವಾರ. |
| **18** | 18-ಇಟಕಾಲ | ಇಟಕಾಲ, ಬುರಗಪಲ್ಲಿ, ಮೋತಕಪಲ್ಲಿ, ಶಕಲಾಸಪಲ್ಲಿ, ಗುಂತಾತಿಪಡಂಪಲ್ಲಿ, ನರೇಡ್ಲಾಪಾಡ. |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಡಾ||ಎನ್. ನೋಮೇಶ್ ಕುಮಾರ್)**
ನಿರ್ದೇಶಕರು (ಪಂ. ರಾಜ್) ಮತ್ತು
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH